ಒಬ್ಬಾತ ಕಾನ್ಸ್‌ಟೇಬಲ್ ಬಂದು ಹಿಂದಿನ ಬಾಗಿಲು ತೆರೆದಿರುವುದಾಗಿಯೂ ಮೂಲೆಯಲ್ಲಿ ಹಣ್ಣು, ತರಕಾರಿ ಚೆಲ್ಲಿವೆಯೆಂದೂ ಹೇಳಿದ. ಮತ್ತೊಬ್ಬ ಪಕ್ಕದ ಕೋಣೆಯಿಂದ ಓಡಿ ಬಂದವನೆ ಕಪಾಟುವಿನ ಬಾಗಿಲು ತೆರೆದಿರುವುದಾಗಿಯೂ, ಲಾಕರ್ ಒಡೆದಿರುವುದಾಗಿಯೂ ತಿಳಿಸಿದ. ಎಲ್ಲರ ಚಿತ್ತ ಅತ್ತ ಹರಿಯಿತು. ಜಾಗೃತರಾದ ಇನ್‌ಸ್ಪೆಕ್ಟರ್ ಫೋಟೋಗ್ರಾಫರನ್ನು ಕರೆದುಕೊಂಡು ಒಳಗೆ ಬಂದು ನೋಡಿ, ಬೇಕಾದ ಚಿತ್ರಗಳನ್ನು ತೆಗೆಸಿದರು. ಮಹಜರು ಕೆಲಸಗಳೂ ಜೊತೆ ಜೊತೆಯಲ್ಲೇ ನಡೆಯಿತು. ಪ್ರೊ. ಭಾಸ್ಕರ್‌ಗೆ ದೀಪೂನ ನೆನಪಾಗಿ 'ದೀಪೂ, ದೀಪೂ' ಎಂದು ಕಿರಚಾಡಿದರು. ದೀಪೂ ಎಲ್ಲೂ ಕಾಣಿಸಲಿಲ್ಲ.

ನಟರಾಜ್ ಪಟ್ಟಣಶೆಟ್ಟಿ ಹಿಂದಿನ ಬಾಗಿಲಿನಿಂದ ಆ ಕತ್ತಲೆಯಲ್ಲೇ ಮನೆಗೊಂದು ಸುತ್ತು ಹಾಕಿದರು. ಹೊರಗಡೆ ಜನ ದಟ್ಟೈಸುವುದನ್ನು ಕಂಡ ಇನ್ಸ್‌ಪೆಕ್ಟರ್ ಎಲ್ಲರನ್ನೂ ಮನೆಯಿಂದ ದೂರ ಕಳುಹಿಸಿದರು. ಆ ಹೊತ್ತಿಗೆ ಆಂಬುಲೆನ್ಸ್ ಬಂತು. ಶೀಲಾಳ ಶವವನ್ನು ಸರಕಾರಿ ಆಸ್ಪತ್ರೆಗೆ ಸಾಗಿಸಲಾಯಿತು. ಮನೆಯನ್ನು ಸೀಲ್ ಮಾಡಿ ಅಧಿಕಾರಿಗಳೆಲ್ಲರೂ ಮರಳಿದರು. ಪ್ರೊ. ಭಾಸ್ಕರ್‌ರನ್ನು ಸೋಮಣ್ಣನವರ ಗೆಸ್ಟ್ ಹೌಸಲ್ಲಿ ಉಳಿಸಿಕೊಳ್ಳುವುದಕ್ಕೆ ಪೊಲೀಸ್ ಇನ್‌ಸ್ಪೆಕ್ಟರ್‌ರಿಂದ ವಿಶೇಷ ಅನುಮತಿ ಪಡೆದು ಸೋಮಣ್ಣನವರು ತಮ್ಮ ಕಾರಿಗೆ ಹತ್ತಿಸಿಕೊಂಡರು. ನಟರಾಜ ಪಟ್ಟಣಶೆಟ್ಟರೂ ಅದೇ ಕಾರಿನಲ್ಲಿ ಗೆಸ್ಟ್ ಹೌಸ್ ತಲುಪಿದರು. ತಬ್ಬಲಿ ಶೀಲಾಳನ್ನು ಮಗಳಂತೆ ಸಾಕಿ ಸಲಹಿದ್ದ ಜಾನಮ್ಮನ ಅಳು ಅಸಹನೀಯವಾಗಿತ್ತು. ಇದ್ದ ಒಬ್ಬಳೇ ಮಗಳನ್ನು ಕಣ್ಣೆದುರೇ ಆಂಬುಲೆನ್ಸ್ ಹತ್ತಿಸಿದಾಗ ಕುಸಿದೇ ಹೋದ ಚಂದ್ರಪ್ಪನವರನ್ನು ಡಾ. ಗಣೇಶ್ ತನ್ನ ಕಾರಿಗೆ ಹತ್ತಿಸಿಕೊಂಡು ಆಸ್ಪತ್ರೆಯ ಕಡೆಗೆ ಸಾಗಿದರು.

## 12

'ಕರಿಮಾಯಿ ಗುಡ್ಡದ ತಪ್ಪಲಲ್ಲಿ ಕೊಲೆ' ಎಂಬ ಶಿರೋನಾಮೆ ಹೊತ್ತ ಪುಟ್ಟ ಬರಹವೊಂದು ಅಪೂರ್ಣ ಮಾಹಿತಿಯೊಂದಿಗೆ ವೀರನಗರದ ಪತ್ರಿಕೆಯೊಂದರಲ್ಲಿ ಮರುದಿನವೇ ಪ್ರಕಟವಾಯಿತು. ಶವಪರೀಕ್ಷೆಯಿಂದ ಆಕೆಯ ಮೇಲೆ ಅತ್ಯಾಚಾರವಾದ ಹಾಗೂ ಕತ್ತು ಹಿಚುಕಿ ಕೊಂದ ವಿವರ ಅದೇ ದಿನ ಸಾಯಂಕಾಲದ ಹೊತ್ತಿಗೆ ಜನಜನಿತವಾಯಿತು.

ಶೀಲಾಳ ಕೊಲೆ ಹೇಗಾಯಿತೆಂಬುದು ಮಾತ್ರ ನಿಗೂಢವಾಗಿಯೇ ಇತ್ತು. ಹಳ್ಳಿ ಪ್ರದೇಶವಾದ್ದರಿಂದ ಹಾಗೂ ಮಳೆಗಾಲವೂ ಆಗಿದ್ದುದರಿಂದ ಆ ಇಡೀ ದಿನ ಶವದ ಪೋಸ್ಟ್ ಮಾರ್ಟಮ್ ಹಾಗೂ ಶವಸಂಸ್ಕಾರವಷ್ಟೇ ಮಾಡಿ ಮುಗಿಸುವುದಕ್ಕೆ ಸಾಧ್ಯವಾಯಿತು. ವೀರನಗರದ ಪೊಲೀಸ್ ಸ್ಟೇಷನ್ ಅನ್ವೇಷಣೆಗಾಗಿ ಹಿರಿಯ ಅಧಿಕಾರಿಗಳನ್ನು ಕರೆಸಿದರು. ಅಂದು ಪತ್ರಿಕೆಯಲ್ಲಿ ಬಂದ ಆ ಪುಟ್ಟ ಸುದ್ದಿ ಮತ್ತಷ್ಟು ರೆಕ್ಕೆಪುಕ್ಕಗಳೊಂದಿಗೆ ಅದರ ಮಾರನೆಯ ದಿನ ಎಲ್ಲ ಪತ್ರಿಕೆಗಳಿಗೂ ಆಹಾರವಾಯಿತು. ಅನ್ಯಕಾರ್ಯ ನಿಮಿತ್ತ ಪ್ಲಾಂಟರ್ ಸೋಮಣ್ಣನವರ ಅತಿಥಿಗೃಹದಲ್ಲಿ ಉಳಿದುಕೊಂಡಿದ್ದ ನಟರಾಜ ಪಟ್ಟಣಶೆಟ್ಟರು ತನ್ನ ಕಣ್ಣೆದುರು ನಡೆದುಹೋದ ಘಟನೆಗಳ ಬಗ್ಗೆ ವಿಶೇಷ ಕುತೂಹಲವುಳ್ಳವರಾದರು. ಕೊಲೆಯಾದ ಮಾರನೆಯ ದಿನ ಎಲ್ಲರೂ ಆಸ್ಪತ್ರೆ, ಪೋಲಿಸ್ ಸ್ಟೇಷನ್ ಕೆಲಸದಲ್ಲಿ ಮುಳುಗಿದ್ದಾಗ ನಟರಾಜ್ ಪಟ್ಟಣಶೆಟ್ಟರು ಮಾತ್ರ ಬೇರೆಯೇ ದಾರಿ ಹಿಡಿದಿದ್ದರು. ಅಂದು ಮುಂಜಾನೆ ಪಟ್ಟಣಶೆಟ್ಟರು ಪ್ರೊ. ಭಾಸ್ಕರ್ ಮನೆಗೆ ಬಂದರು. ಮೆಟ್ಟಿಲೇರುತ್ತ ಮೇಲಕ್ಕೆ ಬರುವ ಪ್ರತಿ ಹಂತದಲ್ಲೂ ಏನನ್ನೋ ಹುಡುಕುವವರಂತೆ ಕಾಣುತ್ತಿದ್ದರು.

ಮನೆಯನ್ನು ಪೋಲಿಸರು ಸೀಲ್ ಮಾಡಿದ್ದರು. ಒಳಗಡೆ ಪ್ರವೇಶ ಮಾಡುವಂತಿರಲಿಲ್ಲ. ಹಿಂದಿನ ರಾತ್ರಿ ಅಡುಗೆ ಮನೆಯ ಹಿಂಬಾಗಿಲು ತೆರೆದಿತ್ತು ಎಂಬ ಕಾರಣಕ್ಕೆ ಆ ಕಡೆ ಹೋದರು. ಹರಿದು ಬಿದ್ದ ಕಾಫಿಯ ಎಲೆಗಳು, ಚೆಲ್ಲಿದ ಹಸಿ ಕಾಫಿ ಬೀಜಗಳು ಯಾರೋ ಅತ್ತ ಓಡಿರಬಹುದಾದ ಸೂಚನೆಯನ್ನಿತ್ತವು. ಬಿದ್ದ ಕಾಯಿ, ಎಲೆಗಳನ್ನು ಗಮನಿಸುತ್ತ ಮುಂದಕ್ಕೆ ಬರುತ್ತಾ ತೋಟದ ಬೇಲಿ ತಲುಪಿದರು. ಬೇಲಿಯಾಚೆ ತಗ್ಗಿನಲ್ಲಿ ರಸ್ತೆ. ರಸ್ತೆಯ ಆಚೆ ಭಾಗದಲ್ಲಿ ಮತ್ತೆ ಕಾಫಿ ತೋಟ. ಬೇಲಿಯ ಬದಿಗೆ ಬಂದು ರಸ್ತೆಯ ಕಡೆಗೆ ನಟರಾಜ್ ಇಣುಕು ಹಾಕಿದರು. ಬೇಲಿಯಿಂದ ಯಾರೋ ಕೆಳಕ್ಕೆ ಧುಮುಕಿರಬಹುದಾದ ಚಿಹ್ನೆ ಬೇಲಿಯ ಕೆಳಗಿನ ಮಣ್ಣುಗೋಡೆಯಲ್ಲಿ ಕಾಣಿಸಿತು. ರಸ್ತೆಗೆ ಕತ್ತಲಲ್ಲಿ ಇಳಿಯುವಾಗ ಕಾಲು ಜಾರಿಯೋ ಏನೊ, ಗೋಡೆಯ ಮಣ್ಣು ಚೆದುರಿಹೋಗಿತ್ತು. ಬೇಲಿ ಹಾರಿದ ವ್ಯಕ್ತಿ ಕೆಳಕ್ಕೆ ಬಿದ್ದಿರಬಹುದಾದ ಸಾಧ್ಯತೆಗಳೂ ಕಾಣಿಸಿದವು. ಪಟ್ಟಣಶೆಟ್ಟರು ಬೇಲಿಯ ಕಂಬಕ್ಕೆ ಒಳಗಿನಿಂದ ಕಾಲು ಕೊಟ್ಟು ಬೇಲಿಯೇರಿ ಆತ ಬಿದ್ದಿರಬಹುದಾದ ರೀತಿಯನ್ನು ಊಹಿಸಲೆತ್ನಿಸಿದರು. ಕೆಳಕ್ಕೆ ಹಾರಿ ಅದೇ ಜಾಗದ ರಸ್ತೆಯ ಬದಿಗೆ ಬಿದ್ದರು. ಆ ಭಾಗವನ್ನು ಸೂಕ್ಷ್ಮವಾಗಿ ಪರಿಶೋಧಿಸಿದರು. ಆಶ್ಚರ್ಯವೆಂಬಂತೆ ಅಲ್ಲಿ ಹೊಳೆಯುವ ಪುಟ್ಟ ಹರಳೊಂದು ಕಾಣಿಸಿತು! ನಟರಾಜ್‌ರ ಕುತೂಹಲ ಹೆಚ್ಚಿತು. ಅದನ್ನು ಎತ್ತಿಕೊಂಡು ನೋಡಿದರು. ಅದು ರಸ್ತೆಯಲ್ಲಿ ಬಿದ್ದಿರಬಹುದಾದ ಸಾಮಾನ್ಯ ಹರಳಿನಂತಲ್ಲದೆ ತುಂಬ ಬೆಲೆಯುಳ್ಳ ಹರಳಿನಂತೆ ಕಂಡಿತು. ಒಂದು ಕಾಫಿ ಎಲೆಯಲ್ಲಿ ಅದನ್ನು ಸುತ್ತಿ ಕಟ್ಟಿ ತನ್ನ ಪರ್ಸಿನಲ್ಲಿ ಜೋಪಾನಗೊಳಿಸಿದರು. ರಸ್ತೆಯನ್ನು ಗಮನಿಸುತ್ತ ಮನೆಯ ಗೇಟಿನ ಕಡೆಗೆ ನಡೆದರು. ಸ್ವಲ್ಪವೇ ಮುಂದೆ, ಗೇಟಿನ ತಿರುವಿಗೆ ಇನ್ನೂ ನೂರು ಮಾರು ದೂರದಲ್ಲಿ ಕಾರಿನ ಎರಡು ಟೈರುಗಳು ಮಣ್ಣುರಸ್ತೆಯಲ್ಲಿ ಕೊಸರಿಕೊಂಡು ಸ್ಟಾರ್ಟ್ ಆದದ್ದು ಕಾಣಿಸಿತು. ನೆಲ ಗುಳಿ ಬಿದ್ದು ಮಣ್ಣು ರಟ್ಟಿತ್ತು!

ಕಾರು ಮುಂದೆ ಹೋಗಿ ಅದೇ ಮಣ್ಣಿನ ರಸ್ತೆಯ ಮೂಲಕ ಮುಖ್ಯ ರಸ್ತೆ ಸೇರಿರಬೇಕು. ಮುಂದಕ್ಕೆ ಹೋಗಿದೆ ಎಂಬುದಕ್ಕೆ ರಸ್ತೆಯೇ ಪುರಾವೆ. ಆಶ್ಚರ್ಯದ ಸಂಗತಿಯೆಂದರೆ ಕಾರು ನಿಂತ ಜಾಗ. ಮೆಟ್ಟಿಲುಗಳ ಮುಂಭಾಗದಲ್ಲಿ ಕಾರು ನಿಲ್ಲಬೇಕಿತ್ತು ಅಥವಾ ಬಲಬದಿಯಿಂದ ಸುತ್ತಿ ಮನೆಯ ಅಂಗಳಕ್ಕೆ ಬರಬೇಕಿತ್ತು. ಬದಲಿಗೆ ಗೇಟಿಗೆ ಮರೆಯಾಗಿರುವ ಜಾಗದಲ್ಲಿ ನಿಲ್ಲಬೇಕಾಗಿ ಬಂದುದೇಕೆ? ಗೇಟಿನ ತನಕದ ಟಾರು ರಸ್ತೆ ಸಪೂರವಿದ್ದರೂ ಕಾರು ತಿರುಗಿಸುವುದಕ್ಕೆ ಅನುಕೂಲವಿತ್ತು. ಅದು ಬಿಟ್ಟು ಇಷ್ಟು ದೂರ ಬಂದು ಕಾರು ನಿಲ್ಲಿಸಲು ಕಾರಣವೇನು? ಯಾರಾದರೂ ಅದೇ ರಸ್ತೆಯಲ್ಲಿ ಬರುವವರು ಗೇಟಿನ ಬಳಿ ತಮ್ಮ ಕಾರನ್ನು ಕಂಡುಬಿಟ್ಟರೆ ಎಂಬ ಭಯದಿಂದ ಇರಬಹುದೆ? ಯೋಚಿಸುತ್ತ, ತಲೆ ಹುಣ್ಣು ಮಾಡುತ್ತ ನಟರಾಜ್ ಅತಿಥಿಗೃಹ ತಲುಪಿದರು.

## 13

ಪ್ಲಾಂಟರ್ ಚಂದ್ರಪ್ಪನವರು ಪವನ್ ಬಗ್ಗೆ ತಮಗಿದ್ದ ಸಂದೇಹವನ್ನು ನಟರಾಜ್ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ಅವರೆದುರು ಹಂಚಿಕೊಂಡಿದ್ದರು. ಹಿಂದೆ ಆತ ಮಾಡಿದ ಅನಾಹುತಗಳನ್ನು, ಆತನ ವ್ಯಕ್ತಿತ್ವವನ್ನು ವಿವರಿಸಿ ಹೇಳಿದ್ದರು. ಈ ನಡುವೆ ದೀಪೂ ಕಾಣೆಯಾಗಿದ್ದ. ಪೊಲೀಸರು ಆತನನ್ನು ಕಾಡುಮೇಡುಗಳಲ್ಲೆಂಬಂತೆ ಹುಡುಕತೊಡಗಿದರು. ಪ್ರೊ. ಭಾಸ್ಕರ್ ಮನೆಯಲ್ಲಿ ಸಿಕ್ಕಿದ್ದ ದೀಪೂವಿನ ವಿವಿಧ ಭಂಗಿಯ ಚಿತ್ರಗಳು ಕೊಲೆಯಾದ ಮೂರನೆಯ ದಿನಕ್ಕೆ ಪೊಲೀಸರಿಗೆ ಬೇಕಾದವನೆಂಬ ತಲೆಬರಹದೊಂದಿಗೆ ಪತ್ರಿಕೆಗಳಲ್ಲಿ ಕಾಣಿಸಿಕೊಂಡವು. ಕೊಲೆಯ ಸಮಗ್ರ ವಿವರಗಳೂ ಪ್ರಕಟಗೊಂಡವು. ಪತ್ರಿಕೆಯಲ್ಲಿ ವರದಿಯಾದ ದಿನವೇ ಉನ್ನತ ವಲಯದ ಪೊಲೀಸ್ ಅಧಿಕಾರಿಗಳು ಧಾವಿಸಿ ಬಂದರು. ಜೊತೆಗೆ ಪೊಲೀಸ್ ನಾಯಿಯನ್ನೂ ಕರೆತಂದಿದ್ದರು. ಪ್ರೊ. ಭಾಸ್ಕರ್, ನಟರಾಜ್, ಸೋಮಣ್ಣ, ಡಾ. ಗಣೇಶರ ಸಮ್ಮುಖದಲ್ಲಿ ಮತ್ತೆ ಮನೆಯ ಬಾಗಿಲನ್ನು ತೆರೆಯಲಾಯಿತು. ನಾಯಿ ಸಮೇತ ಎರಡು ಹೆಜ್ಜೆ ಮುಂದಿಟ್ಟ ಪೊಲೀಸ್ ಹಾಗೂ ಇನ್ಸ್‌ಪೆಕ್ಟರ್ ಒಮ್ಮೆಲೆ ಮೂಗು ಮುಚ್ಚಿ ಬಳಿಕ ಹಿಂದಡಿಯಿಟ್ಟು ಪರಸ್ಪರ ಮುಖ ನೋಡಿಕೊಂಡರು. ಕೊಳೆತ ಮಾಂಸದ ವಾಸನೆ. ನಾಯಿ ಗಲಿಬಿಲಿಗೊಂಡು ಜೋರಾಗಿ ಬೊಗಳತೊಡಗಿತು.

'ಎಲ್ಲರ ಕಣ್ಣೆದುರಲ್ಲೇ ಶವ ಸಾಗಿಸಲಾಗಿದ್ದು ಅಲ್ಲಿ ವಾಸನೆಗೆ ಆಸ್ಪದವೇ ಇರಲಿಲ್ಲ' ಎಂದುಕೊಂಡರು ಅಲ್ಲಿದ್ದವರೆಲ್ಲರು. ಒಬ್ಬಾತ ಪೊಲೀಸ್ ಸ್ವಯಂಸ್ಫೂರ್ತಿಯಿಂದ ಮೂಗಿಗೊಂದು ಕರವಸ್ತ್ರ ಕಟ್ಟಿದ ಒಳನುಗ್ಗಿದ. ಕೈಯಲ್ಲಿದ್ದ ಬಡಿಗೆಯಿಂದ ಮೇಜು ಕುರ್ಚಿಗಳಿಗೆ ಬಡಿಯುತ್ತ ಆತ ಮುಂದಕ್ಕೆ ನಡೆದ. ಎಲ್ಲರೂ ಕುತೂಹಲಿಗಳಾಗಿ ಹೊರಗಡೆ ಕಾದರು. ಕೆಲವೇ ನಿಮಿಷಗಳಲ್ಲಿ ಅದೇನೋ ಯುದ್ಧ ಗೆದ್ದವನಂತೆ 'ಸಾರ್ ಸಾರ್' ಎಂದು ಅಲ್ಲಿಂದಲೇ ಬೊಬ್ಬಿರಿದ. ಇನ್‌ಸ್ಪೆಕ್ಟರ್ ಇನ್ನು ತಡಮಾಡುವುದು ಸರಿಯಲ್ಲವೆಂದುಕೊಂಡು ತಾನೂ ಮೂಗು ಮುಚ್ಚಿ ಒಳನುಗ್ಗಿದರು. ಅಷ್ಟರಲ್ಲಿ ಕಾನ್‌ಸ್ಟೇಬಲ್ ತನ್ನ ಕೋಲಿನ ತುದಿಯಲ್ಲಿ ಭಾರದ ಪ್ಲಾಸ್ಟಿಕ್ ಲಕೋಟೆಯನ್ನು ಸಿಕ್ಕಿಸಿ ತನ್ನ ದೇಹದಿಂದ ಸಾಧ್ಯವಾದಷ್ಟೂ ದೂರಕ್ಕೆ ಹಿಡಿದುಕೊಂಡು ಹೊರಕ್ಕೆ ಬಂದ. ನಾಯಿಯ ಗೊಂದಲ ಮತ್ತಷ್ಟು ಹೆಚ್ಚಾಯಿತು. ಅದು ಒಂದೇ ಏಟಿಗೆ ಪೊಲೀಸಿನ ಕೋಲ ತುದಿಯ ಲಕೋಟೆಯನ್ನು ಎಳೆದು ಹರಿದು ಹಾಕಿತು. ಅದರಲ್ಲಿದ್ದ ಮೀನು ಮೆಟ್ಟಲ